"ಮಧುರ ಮಕ್ಕಳೇ - ತಂದೆಯು ಮನುಷ್ಯರಿಂದ ದೇವತೆಗಳನ್ನಾಗಿ ಮಾಡಲು ಬಂದಿದ್ದಾರೆಂದರೆ ಅವರಿಗೆ ಹೃದಯಪೂರ್ವಕ ಅಭಿನಂದನೆಗಳನ್ನು ಹೇಳಿ, ಶ್ರೀಮತದ ಮೇಲೆ ನಡೆಯುತ್ತಾ ಇರಿ, ಒಬ್ಬ ತಂದೆಯೊಂದಿಗೆ ಸತ್ಯ ಪ್ರೀತಿಯನ್ನಿಟ್ಟುಕೊಳ್ಳಿ"

ಪ್ರಶ್ನೆ: ಯಾವ ಮಕ್ಕಳಿಗೆ ತಂದೆಯೊಂದಿಗೆ ಪ್ರೀತಿ ಇದೆ, ಅವರ ಚಿಹ್ನೆಗಳು ಏನಾಗಿರುವುದು?

ಉತ್ತರ: ತಂದೆಯೊಂದಿಗೆ ಸತ್ಯ ಪ್ರೀತಿಯಿದೆಯೆಂದರೆ ಅವರು ತಂದೆಯನ್ನೇ ನೆನಪು ಮಾಡುತ್ತಾರೆ, ಅವರ ಮತದನುಸಾರವೇ ನಡೆಯುತ್ತಾರೆ. ಮನಸ್ಸಾ, ವಾಚಾ ಕರ್ಮಣಾ ಯಾರಿಗೂ ದುಃಖವನ್ನು ಕೊಡುವುದಿಲ್ಲ. ಯಾರ ಪ್ರತಿಯೂ ತಿರಸ್ಕಾರದ ಭಾವನೆ ಇರುವುದಿಲ್ಲ. ತಮ್ಮ ಸತ್ಯ-ಸತ್ಯ ಲೆಕ್ಕಾಚಾರವನ್ನು ತಂದೆಗೆ ಕೊಡುತ್ತಾರೆ. ಕೆಟ್ಟ ಸಂಗದಿಂದ ತಮ್ಮನ್ನು ಸಂಭಾಲನೆ ಮಾಡಿಕೊಳ್ಳುತ್ತಾರೆ.

ಗೀತೆ: ಧೈರ್ಯವನ್ನು ತಾಳು ಮಾನವನೇ............

ಓಂ ಶಾಂತಿ. ಬ್ರಾಹ್ಮಣರಿಗೆ ಅವಸ್ಯವಾಗಿ ಧೈರ್ಯವಿರುತ್ತದೆ ಏಕೆಂದರೆ ಬ್ರಾಹ್ಮಣರಿಗೆ ಪರಮಪಿತ ಪರಮಾತ್ಮನ ಜೊತೆ ಪ್ರೀತಿ ಇದೆ ನಂಬರ್ವಾರ್ ಪುರುಷಾರ್ಥ ಅನುಸಾರ. ಎಲ್ಲರಿಗೆ ಒಂದೇ ತರಹದ ಪ್ರೀತಿ ಇರುವುದಿಲ್ಲ. ಹೇಗೆ ಮಮ್ಮಾ-ಬಾಬಾ ಮತ್ತು ಮಕ್ಕಳು ತಮ್ಮ-ತಮ್ಮ ಅನುಭವವನ್ನು ತಿಳಿಸುತ್ತಾರೆ. ನಾನು ಆತ್ಮ ಎಂದು ಆತ್ಮವು ತನಗೋಸ್ಕರ ಹೇಳುತ್ತದೆ. ನಂತರ ಬಾಬಾ ನಾನು ಪರಮಾತ್ಮ ಎಂದು ಹೇಳುತ್ತಾರೆ. ಆತ್ಮವು ಹೇಳುತ್ತದೆ - ನಾನು ಪರಮಪಿತ ಪರಮಾತ್ಮನನ್ನು ತುಂಬಾ ನೆನಪು ಮಾಡುತ್ತೇನೆ ಏಕೆಂದರೆ ನಾನು ತಿಳಿದುಕೊಂಡಿದ್ದೇನೆ - ಅರ್ಧಕಲ್ಪ ನಾವು ರಾವಣ ರಾಜ್ಯದಲ್ಲಿ ತುಂಬಾ ದುಃಖವನ್ನು ನೋಡಿದ್ದೇನೆ. ಶುರುವಿನಿಂದ ದುಃಖವಾಯಿತೆಂದಲ್ಲ. ರಾವಣ ರಾಜ್ಯದಲ್ಲಿ ನಿದಾನ-ನಿದಾನವಾಗಿ ದುಃಖವು ವೃದ್ಧಿ ಆಗುತ್ತದೆ. ಕಲೆಗಳು ಕಡಿಮೆ ಆಗುತ್ತಾ ಹೋಗುತ್ತವೆ. ನಾನು ಆತ್ಮನಿಗೆ ಈಗ ಪರಮಪಿತ ಪರಮಾತ್ಮ ತಿಳಿಸುತ್ತಾರೆ - ಮೊದಲು ನೀವು ಅವ್ಯಭಿಚಾರಿ ಭಕ್ತಿಯಲ್ಲಿದ್ದಿರಿ. ಕೇವಲ ನನ್ನನ್ನು ನೆನಪು ಮಾಡುತ್ತಿದ್ದಿರಿ. ನಂತರ ವ್ಯಭಿಚಾರಿ ರಜೋಗುಣಿ ಭಕ್ತಿಯಲ್ಲಿ ಬಂದಿದ್ದೀರಿ. ಈಗಂತು ತಮೋಗುಣಿ ಭಕ್ತಿಯಾಗಿ ಬಿಟ್ಟಿದೆ, ಯಾರು ಬಂದರೆ ಅವರನ್ನೇ ಪೂಜಿಸುತ್ತಿರುತ್ತಾರೆ, ಇದಕ್ಕೆ ಭೂತ ಪೂಜೆ ಎಂದು ಹೇಳಲಾಗುತ್ತದೆ ಏಕೆಂದರೆ ಶರೀರವು ಪಂಚ ಭೂತಗಳಿಂದ ಮಾಡಲ್ಪಟ್ಟಿದೆ. ಇವರು ಇಂತಹ ಸ್ವಾಮಿ ಆಗಿದ್ದಾರೆ ಎಂದು ಕೇವಲ ಪಂಚ ತತ್ವಗಳ ಶರೀರವನ್ನು ನೋಡಿ ಹೇಳುತ್ತಾರೆ. ಅವರ ಚರಣಗಳಿಗೆ ಬೀಳುತ್ತಾರೆ. ಇದು ತಮೋಪ್ರಧಾನ ಭಕ್ತಿಯಾಗಿದೆ. ಈಗ ನಾವು ಆತ್ಮರು ತಿಳಿದುಕೊಂಡಿದ್ದೇವೆ - ಪರಮಪಿತ ಪರಮಾತ್ಮ ಪುನಃ ನಮಗೆ ಆಸ್ತಿಯನ್ನು ಕೊಡಲು ಬಂದಿದ್ದಾರೆ, ಆದ್ದರಿಂದ ಎಷ್ಟಾದರೆ ಅಷ್ಟು ಅವರನ್ನು ನೆನಪು ಮಾಡುತ್ತೇವೆ. ತಂದೆಯ ಆಜ್ಞೆ ಆಗಿದೆ - ನಿರಂತರ ನನ್ನನ್ನು ನೆನಪು ಮಾಡಿ. ದೇಹೀ-ಅಭಿಮಾನಿ ಭವ ಅಥವಾ ಆತ್ಮಾಭಿಮಾನಿ ಭವ. ಬ್ರಹ್ಮಾ ತಂದೆ ಹೇಳುತ್ತಾರೆ - ನಾನು ಶಿವಬಾಬಾನಿಗೆ ಗಳಿಗೆ-ಗಳಿಗೆಯೂ ಸಹ ಅಭಿನಂದನೆಗಳನ್ನು ಹೇಳುತ್ತೇನೆ. ಬಾಬಾ ತಾವು ನನ್ನನ್ನು ಅಂಧಕಾರದಿಂದ ಹೊರ ತೆಗೆದಿದ್ದೀರಿ. ಬಾಬಾನ ಜೊತೆ ನಮ್ಮ ಪ್ರೀತಿಯಿದೆ. ಮತ್ತೆಲ್ಲರದೂ ವಿನಾಶ ಕಾಲೆ ವಿಪರೀತ ಬುದ್ಧಿಯಾಗಿದೆ, ಅವರು ಪೂರ್ಣ ಆಸ್ತಿಯನ್ನು ಪಡೆಯಲು ಸಾಧ್ಯವಿಲ್ಲ. ಲೌಕಿಕ ಮಕ್ಕಳಿಗೂ ಸಹ ತಂದೆಯೊಂದಿಗೆ ಪ್ರೀತಿ ಇರುತ್ತದೆ. ತಂದೆಯ ಮತದಂತೆ ನಡೆಯುತ್ತೀರೆಂದರೆ ತಂದೆಯೂ ಖುಷಿಯಾಗುತ್ತಾರೆ. ಒಂದುವೇಳೆ ಮಗು ತಂದೆಯ ಮತದಂತೆ ನಡೆಯುವುದಿಲ್ಲವೆಂದರೆ ತಂದೆಯು ಖುಷಿಯಾಗುವುದಿಲ್ಲ. ಯಾರು ಮತದನುಸಾರ ನಡೆಯುವುದಿಲ್ಲ ಅವರು ಕುಪುತ್ರ ಮಕ್ಕಳಾಗುತ್ತಾರೆ. ಇಲ್ಲಿ ಬೇಹದ್ದಿನ ತಂದೆಯೂ ಸಹ ಹೇಳುತ್ತಾರೆ - ಮಕ್ಕಳೇ, ನನ್ನನ್ನು ನೆನಪು ಮಾಡಿ ಆಗ ನಿಮ್ಮೆಲ್ಲಾ ವಿಕರ್ಮಗಳು ಭಸ್ಮವಾಗುತ್ತವೆ. ನನ್ನವರಾಗಿದ್ದೀರೆಂದರೆ ಕರ್ಮೇಂದ್ರಿಯಗಳಿಂದ ಯಾವುದೇ ಪಾಪಕರ್ಮವನ್ನು ಮಾಡಬಾರದು. ಎಂದೂ ಶ್ರೀಮತದ ಉಲ್ಲಂಘನೆ ಮಾಡಬಾರದು. ಯಾರಾದರೂ ಲಕ್ಷ್ಮಿಯ ಆಹ್ವಾನ ಮಾಡುತ್ತಾರೆ ಅಥವಾ ದೇವತೆಗಳ ಪೂಜೆ ಮಾಡುತ್ತಾರೆಂದರೆ ತಂದೆಗೆ ನಾವು ಅಭಿನಂದನೆಗಳನ್ನು ಹೇಳಬೇಕು. ಅವರ ಮತದ ಮೇಲೆ ನಡೆಯುವುದಿಲ್ಲವೆಂದರೆ ಜನ್ಮ-ಜನ್ಮಾಂತರಗಳಗೋಸ್ಕರ ಪದವಿಯನ್ನು ಭ್ರಷ್ಟ ಮಾಡಿಕೊಳ್ಳುತ್ತಾರೆ. ಭಲೆ ನಾವು ಇಲ್ಲಿ ಪತಿತರಿಗೆ ಭ್ರಷ್ಟರೆಂದು ಹೇಳುತ್ತೇವೆ, ಆದರೆ ಅಲ್ಲಿ ಕಡಿಮೆ ಪದವಿಗೆ ಭ್ರಷ್ಟ ಪದವಿ ಎಂದು ಹೇಳುತ್ತಾರೆ. ತಂದೆಯು ಹೇಳುತ್ತಾರೆ - ಮಕ್ಕಳೇ ನನ್ನೊಂದಿಗೆ ಒಳ್ಳೆಯ ರೀತಿಯಲ್ಲಿ ಪ್ರೀತಿಯನ್ನು ಇಟ್ಟುಕೊಳ್ಳಿ. ಹೇಗೆ ಸ್ತ್ರೀ ಪತಿಯನ್ನು ನೆನಪು ಮಾಡುತ್ತಾರೆ, ಹಾಗೆಯೇ ನೀವು ನನ್ನನ್ನು ನೆನಪು ಮಾಡಿ. ನನ್ನ ಶ್ರೀಮತದ ಮೇಲೆ ನಡೆಯಿರಿ. ಮನಸ್ಸಾ, ವಾಚಾ, ಕರ್ಮಣಾ ಯಾರಿಗೂ ದುಃಖವನ್ನು ಕೊಡಬೇಡಿ. ಮನಸ್ಸಿನಲ್ಲಿ ಯಾರ ಪ್ರತಿಯೂ ತಿರಸ್ಕಾರದ ಭಾವನೆಯನ್ನು ಇಟ್ಟುಕೊಳ್ಳಬಾರದು. ಏಕೆಂದರೆ ಪ್ರತಿ ಆತ್ಮವು ತಮ್ಮ-ತಮ್ಮ ಪಾತ್ರವನ್ನು ಅಭಿನಯಿಸುತ್ತಿದ್ದಾರೆ.

ನೀವು ತಿಳಿದುಕೊಂಡಿದ್ದೀರಿ - ಈಗಿನ ಈ ಬ್ರಾಹ್ಮಣಜನ್ಮವು ಭವಿಷ್ಯದ ಜನ್ಮಕ್ಕಿಂತಲೂ ಶ್ರೇಷ್ಠವಾಗಿದೆ. ಇಲ್ಲಿ ನಾವು ಈಶ್ವರೀಯ ಸಂತಾನರಾಗಿದ್ದೇವೆ. ಸತ್ಯಯುಗದಲ್ಲಿ ದೈವೀ ಸಂತಾನರಾಗಿರುತ್ತೇವೆ. ಆದರೆ ಇಲ್ಲಿಯ ಮಹಿಮೆಯು ಜಾಸ್ತಿ ಇದೆ. ಜಗದಂಬಾರವರಿಂದ 21 ಜನ್ಮಗಳ ಆಸ್ತಿಯು ಸಿಗುತ್ತದೆ. ಲಕ್ಷ್ಮಿಯಿಂದ ಏನು ಸಿಗುತ್ತದೆ? ಈ ಮಾತುಗಳನ್ನು ಹೊಸಬರು

ತಿಳಿಯಲು ಸಾಧ್ಯವಿಲ್ಲ. ಅನೇಕರು ಬರುತ್ತಾರೆ, ಆದರೆ ಯಾರಿಗೆ ನಿಶ್ಚಯವಿಲ್ಲ, ಅವರು ನಿಲ್ಲಲು ಸಾಧ್ಯವಿಲ್ಲ. ಬಾಬಾ ಮಮ್ಮಾ ಮಕ್ಕಳ ಮಿತ್ರಸಂಬಂಧಿಕರು ಅನೇಕರು ಬರುತ್ತಿದ್ದರು ಅಥವಾ ಆಫೀಸರ್ಸ್ ಮುಂತಾದವರು ಬರುತ್ತಿದ್ದರು ಆಗ ಅವರನ್ನು ಆಹ್ವಾನ ಮಾಡಲಾಗುತ್ತಿತ್ತು. ಏಕೆಂದರೆ ಅವರಿಗೆ ಬಾಣವು ನಾಟಲಿ, ಅವರ ಕಲ್ಯಾಣವಾಗಲಿ ಎಂದು. ಆಗ ತಕ್ಷಣ ತಿಳಿಯುತ್ತದೆ - ಇವರು ಈಶ್ವರೀಯ ಕುಲದವರಾಗಿದ್ದಾರೆಯೇ ಅಥವಾ ಆಸುರಿ ಕುಲದವರಾಗಿದ್ದಾರೆಯೇ, ಇವರಿಗೆ ತಂದೆಯೊಂದಿಗೆ ಪ್ರೀತಿ ಇದೆಯೇ ಅಥವಾ ಇಲ್ಲವೇ ಎನ್ನುವುದು ಎಂದು ತಿಳಿಯುತ್ತದೆ. ಇಲ್ಲಿ ಬರುವುದಂತು ಅನೇಕರು ಬರುತ್ತಾರೆ ಮತ್ತು ಸರಿ ಹೋಗುತ್ತಾರೆ ನಂತರ ಹೊರಗಡೆ ಹೋಗಿ ಕೆಟ್ಟ ಸಂಗದಲ್ಲಿ ಅಥವಾ ಮಾಯೆಯ ಸಂಗದಲ್ಲಿ ವಿಕಾರಿಗಳಾಗಿ ಬಿಡುತ್ತಾರೆ. ನಾವು ಸೋತು ಹೋದೆವೆಂದು ಬರೆಯುತ್ತಾರೆ. ಒಂದುವೇಳೆ ತಿಳಿಸದೇ ಇದ್ದರೆ ಪಾಪವು ವೃದ್ಧಿ ಆಗುತ್ತಾ ಹೋಗುವುದು. ನಿಮ್ಮದು ಈಗ ತಂದೆಯ ಜೊತೆ ಪ್ರೀತಿ ಬುದ್ಧಿ ಇದೆ. ಹಾ! ನಿಮ್ಮಲ್ಲಿಯು ನಂಬರ್ವಾರ್ ಪುರುಷಾರ್ಥ ಅನುಸಾರ ಪ್ರೀತಿ ಬುದ್ಧಿ ಇದೆ. ಶಿವಬಾಬಾ ಮಕ್ಕಳಿಗೆ ತಿಳಿಸುತ್ತಾರೆ, ಎಂದೂ ಯಾವುದೇ ವಿಕರ್ಮವನ್ನು ಮಾಡಬಾರದು, ಶ್ರೀಮತದ ಮೇಲೆ ನಡೆಯಬೇಕು. ಬಾಬಾನ ಮಕ್ಕಳಾಗಿದ್ದೀರೆಂದರೆ ನಿಮ್ಮ ಚಲನೆಯೂ ಸಹ ಅದೇ ರೀತಿ ಇರಬೇಕು. ತಂದೆಗೆ ಪೂರ್ಣವಾಗಿ ಗೊತ್ತಾಗಬೇಕು - ತಂದೆಯು ಮುಕ್ತಿ-ಜೀವನ್ಮುಕ್ತಿ ಹಾಗೂ ವಿಶ್ವದ ರಾಜ್ಯಭಾಗ್ಯವನ್ನು ಕೊಡುತ್ತಾರೆ ಆದ್ದರಿಂದ ಮಕ್ಕಳ ಹತ್ತಿರ ಏನಿದೆ ಎನ್ನುವುದು ತಂದೆಗೆ ಗೊತಾಗುವುದೇ ಇಲ್ಲ, ಆದ್ದರಿಂದ ತಂದೆಯ ಬಳಿ ಮಕ್ಕಳ ಪೂರ್ಣ ಲೆಕ್ಕವು ಬರಬೇಕಾಗಿದೆ. ನನಗೆ ಲೆಕ್ಕವನ್ನು ತಿಳಿಸುವುದರಿಂದ ನಿಮಗೇನೂ ನಷ್ಟವಾಗುವುದಿಲ್ಲ. ಮನುಷ್ಯರು ಎಲ್ಲಾ ಹಣ ಮುಂತಾದವುಗಳನ್ನು ತಮ್ಮ ಕೆಲಸದಲ್ಲಿ ತೊಡಗಿಸಿಕೊಳ್ಳುತ್ತಾರೆ ಆದರೆ ನಾನು ನಿರಾಕಾರನಾಗಿದ್ದೇನೆ, ನೀವು ಮಕ್ಕಳ ಕೆಲಸದಲ್ಲಿಯೇ ಎಲ್ಲವನ್ನು ತೊಡಗಿಸುತ್ತೇನೆ. ಹೇಗೆ ಗಾಂಧೀಜಿಯು ಎಲ್ಲವನ್ನು ದೇಶದ ಕಾರ್ಯದಲ್ಲಿ ತೊಡಗಿಸುತ್ತಿದ್ದರು ಆದ್ದರಿಂದ ಅವರ ಹೆಸರು ಪ್ರಸಿದ್ಧಿಯಾಗಿದೆ. ಅವಶ್ಯವಾಗಿ ಗಾಂಧೀಜಿಯು ಕಾಂಗ್ರೆಸ್ ರಾಜ್ಯವನ್ನು ಸ್ಥಾಪನೆ ಮಾಡಿದರು ಇಲ್ಲವೆಂದರೆ ಇಲ್ಲಿ ಮೊದಲು ರಾಜರುಗಳ ರಾಜ್ಯವಿತ್ತು ಆದ್ದರಿಂದ ಅವರು ಪ್ರಜಾ ರಾಜ್ಯವನ್ನು ಸ್ಥಾಪನೆ ಮಾಡಿದರು. ಈಗ ತಂದೆಯು ಪುನಃ ಹೊಸ ರಾಜಧಾನಿ, ರಾಮ ರಾಜ್ಯದ ಸ್ಥಾಪನೆ ಮಾಡುತ್ತಿದ್ದಾರೆ- ಈ ಮಾತು ಎಲ್ಲಾ ಮಕ್ಕಳ ಬುದ್ಧಿಯಲ್ಲಿ ಕುಳಿತುಕೊಳ್ಳುವುದೇ ಇಲ್ಲ. ಒಂದುವೇಳೆ ಬುದ್ಧಿಯಲ್ಲಿ ಕುಳಿತುಕೊಂಡಿದ್ದೇ ಆದರೆ ಖುಷಿಯ ನಶೆ ಏರುತ್ತದೆ. ಅವರು ತಂದೆಯ ಜೊತೆ ಸದಾ ಯೋಗವನ್ನು ಜೋಡಿಸುತ್ತಿರುತ್ತಾರೆ. ತಂದೆಯು ಹೇಳುತ್ತಾರೆ ಪರಮಧಾಮದಲ್ಲಿ ಇರುವ ತಂದೆಯನ್ನು ಅಲ್ಲಿಯೇ ನೆನಪು ಮಾಡಿ ಏಕೆಂದರೆ ಅಲ್ಲಿಗೇ ಹೋಗಬೇಕಾಗಿದೆ. ಈಗ ನಾಟಕವು ಪೂರ್ಣ ಆಗುವುದಿದೆ. ನಾಟಕವನ್ನು ಯಾರೂ ತಿಳಿದುಕೊಂಡಿಲ್ಲ. ಮತ್ತು ಯಾರಿಗೂ ನನ್ನ ಜೊತೆ ಪ್ರೀತಿ ಬುದ್ಧಿ ಇಲ್ಲ. ಆದ್ದರಿಂದ ಅವರು ಹೇಳುತ್ತಾರೆ ನಾವು ಪರಮಪರೆಯಿಂದ ಗಂಗಾ ಸ್ನಾನ ಮಾಡುತ್ತಲೇ ಬಂದಿದ್ದೇವೆ. ಸತ್ಯಯುಗದಲ್ಲಿಯೂ ಮಾಡುತ್ತಿದ್ದೀರೇನು? ಪರಂಪರೆಯ ಅರ್ಥವನ್ನೂ ಸಹ ತಿಳಿದುಕೊಂಡಿಲ್ಲ. ತಂದೆಯು ಹೇಳುತ್ತಾರೆ ಈಗ ನಿಮ್ಮ ಸುಖದ ದಿನಗಳು ಬರುತ್ತಿದೆ. ನಿಮ್ಮ ಬುದ್ಧಿಯಲ್ಲಿ ಧೈರ್ಯವಿದೆ. ಕೆಲವರಂತು ಏನೂ ತಿಳಿದುಕೊಂಡಿಲ್ಲ. ಇಲ್ಲಿ ತಿಳಿದುಕೊಂಡು ಯಾವಾಗ ಹೊರಗಡೆ ಹೋಗುತ್ತಾರೆ ಆಗ ಮಾಯೆಯು ಎಲ್ಲವನ್ನು ತಿಂದುಬಿಡುತ್ತದೆ. ಹೇಗೆ ನೊಣವು ಸತ್ತಾಗ ಎಲ್ಲಾ ಇರುವೆಗಳು ಅದನ್ನು ಮುತ್ತಿಕೊಳ್ಳುತ್ತದೆ. ಇಲ್ಲಿಯೂ ಸಹ ಯಾರಾದರೂ ಜ್ಞಾನದಿಂದ ಸಾಯುತ್ತಾರೆಂದರೆ ಮಾಯಾ ರೂಪಿ ಇರುವೆಗಳು ಅವರನ್ನು ಮುತ್ತಿಕೊಳ್ಳುತ್ತಾರೆ. ಮಾಯೆಯೂ ಸಹ ಬಲಶಾಲಿಯಾಗಿದೆ, ಕಡಿಮೆ ಏನೂ ಇಲ್ಲ. ತುಂಬಾ ಯುದ್ಧವಾಗುತ್ತದೆ. ಇಲ್ಲಿ ಇದ್ದರೂ ಸಹ ಕ್ಲಾಸಿಗೆ ಬರುವುದಿಲ್ಲವೆಂದರೆ ಅವರು ಸ್ವರ್ಗದಲ್ಲಿ ಬರಲು ಸಾಧ್ಯವಿಲ್ಲ, ಕೃಷ್ಣಪುರಿಯಲ್ಲಿ ಹೋಗಲು ಸಾಧ್ಯವಿಲ್ಲವೆಂದು ತಿಳಿದುಕೊಳ್ಳಲಾಗುತ್ತದೆ. ಅಂತಹವರಿಗೆ ಸ್ವಲ್ಪವೂ ಬೆಲೆ ಇರುವುದಿಲ್ಲ. ನಿಮ್ಮಲ್ಲಿ ಯಾರು ವಜ್ರದ ಸಮಾನರಾಗುತ್ತೀರಿ, ಅವರಿಗೆ ಬೆಲೆ ಇರುತ್ತದೆ. ನಾವು ಬೆಲೆಯುಳ್ಳ ನಾಣ್ಯವಾಗುತ್ತಿದ್ದೇವೆಂದು ನೀವು ತಿಳಿದುಕೊಂಡಿದ್ದೀರಿ. ಒಂದೇ ಮನೆಯಲ್ಲಿ ಒಂದು ಹಂಸ ಮತ್ತು ಒಂದು ಕೊಕ್ಕರೆ ಇದ್ದರೆ ಅಲ್ಲಿ ಅವಶ್ಯವಾಗಿ ಏರು-ಪೇರು ನಡೆಯುತ್ತದೆ. ಇಲ್ಲಂತು ಕೊಕ್ಕರೆಗಳಿಂದ ದೂರವಾಗುತ್ತೀರಿ. ಪತಿತರ ಕೈಯಿಂದ ನೀವು ಆಹಾರವನ್ನು ಸೇವಿಸಲು ಸಾಧ್ಯವಿಲ್ಲ. ಆದರೆ ಮಕ್ಕಳಿಗೆ ತಂದೆಯೊಂದಿಗೆ ಇಷ್ಟು ಪ್ರೀತಿ ಇಲ್ಲ. ಆದ್ದರಿಂದ ಯೋಚನೆ ಮಾಡುತ್ತಾರೆ - ನಮಗೆ ಹೊಟ್ಟೆಯು ಹೇಗೆ ತುಂಬುತ್ತದೆ ಎಂದು. ಅರೇ! ಕಾಡು ಜಾತಿಯವರು ಎಲ್ಲಿಂದ ತಿನ್ನುತ್ತಾರೆ! ಹಿಂದಿನ ಕಾಲದಲ್ಲಂತು ಕೆಲವರು ಕಾವಿ ಬಟ್ಟೆಯನ್ನು ತೊಡುತ್ತಾರೆ, ಆದ್ದರಿಂದ ಸುಲಭವಾಗಿ ಹಣವು ಸಿಗುತ್ತಿರುತ್ತದೆ ಏಕೆಂದರೆ ಯಾರು ಬಂದರೆ ಅವರು ಕಾಲಿಗೆ ಬೀಳುತ್ತಿರುತ್ತಾರೆ ಮತ್ತು ಮೂರ್ತಿಯ ಮುಂದೆ ಹಣವನ್ನು ಸೇರಿಸಿಡುತ್ತಾ ಹೋಗುತ್ತಾರೆ. ತುಂಬಾ ಸಹಜವಾಗಿ ಹಣ ಸಂಪಾದನೆ ಮಾಡುತ್ತಾರೆ. ಈ ಪ್ರಪಂಚವೇ ಹೀಗಿದೆ ಆದ್ದರಿಂದ ನೀವು ಮಕ್ಕಳು ವಿಚಾರ ಮಾಡಬೇಕು ಈ ಪ್ರಪಂಚವು ಬೇಗ ಸಮಾಪ್ತಿಯಾಗಲಿ, ಆಗ ನಾವು ಸ್ವರ್ಗದಲ್ಲಿ ಹೋಗುವೆವು ಆದರೆ ಯೋಗ್ಯರಾಗಬೇಕಲ್ಲವೇ. ಪದವಿಯನ್ನು ಪಡೆಯಬೇಕಲ್ಲವೇ. ಅಲ್ಲಿಯೂ ಸಹ ಪದವಿಗಳಲ್ಲಿ ಅಂತರವಿರುತ್ತದೆ. ಓದಿಸುವವರಂತು ಒಬ್ಬರೇ ಆಗಿದ್ದಾರೆ. ಕೆಲವರು ರಾಜಾ-ರಾಣಿ, ಇನ್ನೂ ಕೆಲವರು ನೌಕರ-ಚಾಕರ, ಇನ್ನೂ ಕೆಲವರು ಸಾಹುಕಾರ ಪ್ರಜೆಗಳಾಗುತ್ತಾರೆ. ರಾಜಧಾನಿಯು ಸ್ಥಾಪನೆ ಆಗುತ್ತಾ ಇದೆ. ಮತ್ಯಾವುದೇ ಧರ್ಮ ಸ್ಥಾಪಕರು ರಾಜಾಯಿಯನ್ನು ಸ್ಥಾಪನೆ ಮಾಡುವುದಿಲ್ಲ. ಆದ್ದರಿಂದ ತಂದೆಯು ಹೇಳುತ್ತಾರೆ ಮಕ್ಕಳೇ ಎಚ್ಚರಿಕೆಯಿಂದಿರಿ. ವಿನಾಶ ಕಾಲದಲ್ಲಿ ತಂದೆಯೊಂದಿಗೆ ಪೂರ್ಣ ಪ್ರೀತಿಬುದ್ಧಿ ಇರಬೇಕು. ಎಷ್ಟು ಪ್ರೀತಿ ಬುದ್ಧಿ ಇರುತ್ತದೆ, ಅಷ್ಟು ತಂದೆಯಿಂದ ಆಸ್ತಿಯನ್ನು ತೆಗೆದುಕೊಳ್ಳುತ್ತೀರಿ. ನಿಮಗೆ ನೆನಪು ಮಾಡುವುದನ್ನೂ ಸಹ ಕಲಿಸಲಾಗುತ್ತದೆ. ತಂದೆಯು ತಿಳಿಸುತ್ತಾರೆ - ನನ್ನನ್ನು ನೆನಪು ಮಾಡಿ ಮತ್ತು ಚಕ್ರವನ್ನು ನೆನಪು ಮಾಡಿ. ಸ್ವದರ್ಶನ ಚಕ್ರವನ್ನು ತಿರುಗಿಸಿ. ನಾವು ಲೈಟ್ಹೌಸ್ ಆಗಿದ್ದೇವೆ, ಅಂಬಿಗ ತಂದೆಯು ನಮ್ಮ ದೋಣಿಯನ್ನು ಪಾರು ಮಾಡುತ್ತಾರೆ. ಒಂದು ಕಣ್ಣಿನಲ್ಲಿ ಶಾಂತಿಧಾಮ, ಇನ್ನೊಂದು ಕಣ್ಣಿನಲ್ಲಿ ಸುಖಧಾಮವನ್ನು

ಇಟ್ಟುಕೊಳ್ಳಬೇಕಾಗಿದೆ. ಒಳ್ಳೆಯದು.

ಮಧುರಾತಿ ಮಧುರ ಅಗಲಿ ಹೋಗಿ ಮರಳಿ ಸಿಕ್ಕಿರುವಂತಹ ಮಕ್ಕಳಿಗೆ ಪ್ರೀತಿಯ ಮಾತ್-ಪಿತ ಬಾಪ್ ದಾದಾರವರ ನೆನಪು ಪ್ರೀತಿ ಹಾಗೂ ಸುಪ್ರಭಾತ. ಆತ್ಮೀಯ ತಂದೆ ಆತ್ಮೀಯ ಮಕ್ಕಳಿಗೆ ನಮಸ್ತೆ.

ಧಾರಣೆಗಾಗಿ ಮುಖ್ಯಸಾರ:

1. ಪ್ರತಿಯೊಬ್ಬ ಪಾತ್ರಧಾರಿಯ ಪಾತ್ರವನ್ನು ನೋಡುತ್ತಾ ಯಾರೊಂದಿಗೂ ತಿರಸ್ಕಾರದ ಭಾವನೆ ಇಟ್ಟುಕೊಳ್ಳಬಾರದು. ಮನಸ್ಸಾ, ವಾಚಾ, ಕರ್ಮಣಾ ಯಾರಿಗೂ ದುಃಖವನ್ನು ಕೊಡಬಾರದಾಗಿದೆ.

2. ತಂದೆಗೆ ತಮ್ಮ ಪೂರ್ಣ ಲೆಕ್ಕವನ್ನು ತಿಳಿಸಬೇಕಾಗಿದೆ. ವಿನಾಶಕಾಲದಲ್ಲಿ ಪೂರ್ಣ ಪ್ರೀತಿ ಬುದ್ಧಿಯುಳ್ಳವರಾಗಬೇಕು. ಶ್ರೀಮತದ ಮೇಲೆ ತಮ್ಮ ಚಲನೆಯನ್ನು ಶ್ರೇಷ್ಠ ಮಾಡಿಕೊಳ್ಳಬೇಕಾಗಿದೆ. ಕೆಟ್ಟ ಸಂಗದಿಂದ ತಮ್ಮನ್ನು ಸಂಭಾಲನೆ ಮಾಡಿಕೊಳ್ಳಬೇಕಾಗಿದೆ.

ವರದಾನ: ಸೂಕ್ಷ್ಮ ಪಾಪಗಳಿಂದ ಮುಕ್ತರಾಗಿದ್ದು ಸಂಪೂರ್ಣ ಸ್ಥಿತಿಯನ್ನು ಪ್ರಾಪ್ತಿ ಮಾಡಿಕೊಳ್ಳುವಂತಹ ಸಿದ್ಧಿ ಸ್ವರೂಪ ಭವ.
ಕೆಲವು ಮಕ್ಕಳು ವರ್ತಮಾನ ಸಮಯದಲ್ಲಿ ಕರ್ಮಗಳ ಗತಿಯ ಜ್ಞಾನದಲ್ಲಿ ಬಹಳ ಹಗುರವಾಗಿ ಬಿಟ್ಟಿದ್ದಾರೆ. ಆದ್ದರಿಂದ ಚಿಕ್ಕ ಪುಟ್ಟ ಪಾಪಗಳಾಗುತ್ತಿರುತ್ತವೆ. ಕರ್ಮದ ಗತಿಯ ಸಿದ್ಧಾಂತವಿದೆ - ಒಂದುವೇಳೆ ತಾವು ಯಾರದೇ ಗ್ಲಾನಿ ಮಾಡುತ್ತೀರಿ, ಯಾರದೇ ಅವಗುಣಗಳನ್ನು ಹರಡುತ್ತೀರಿ ಅಥವಾ ಯಾರೊಂದಿಗಾದರೂ ಹೌದು ಎನ್ನುವುದರಲ್ಲಿ ಹೌದು ಎಂದು ಸೇರಿಸಿದರೂ ಪಾಪದಲ್ಲಿ ಭಾಗಿದಾರರಾಗುತ್ತೀರಿ. ಇಂದು ತಾವು ಯಾರದೇ ಗ್ಲಾನಿ ಮಾಡುತ್ತೀರೆಂದರೆ, ಅವರು ನಾಳೆಯ ದಿನ ಎರಡು ಪಟ್ಟು ಗ್ಲಾನಿ ಮಾಡುತ್ತಾರೆ. ಈ ಚಿಕ್ಕ ಪುಟ್ಟ ಪಾಪಗಳು ಸಂಪೂರ್ಣ ಸ್ಥಿತಿಯನ್ನು ಪ್ರಾಪ್ತಿ ಮಾಡಿಕೊಳ್ಳುವುದರಲ್ಲಿ ವಿಘ್ನ ರೂಪವಾಗುವುದು ಆದ್ದರಿಂದ ಕರ್ಮಗಳ ಗತಿಯನ್ನು ತಿಳಿದು ಪಾಪಗಳಿಂದ ಮುಕ್ತರಾಗಿ ಸಿದ್ಧಿ ಸ್ವರೂಪರಾಗಿರಿ.

ಸ್ಲೋಗನ್: ಆದಿ ಪಿತನ ಸಮಾನರಾಗಲು ಶಕ್ತಿ, ಶಾಂತಿ ಹಾಗೂ ಸರ್ವಗುಣಗಳ ಸ್ಥಂಭವಾಗಿರಿ.

ಮಾತೇಶ್ವರಿಯವರ ಅಮೂಲ್ಯ ಮಹಾವಾಕ್ಯ:

“ನಿರಾಕಾರಿ ಜಗತ್ತು ಅರ್ಥಾತ್ ಆತ್ಮಗಳಿರುವ ಸ್ಥಾನ”

ಯಾವಾಗ ನಾವು ನಿರಾಕಾರಿ ಜಗತ್ತೆಂದು ಹೇಳುತ್ತೇವೆಯೋ ಆಗ ನಿರಾಕಾರನ ಅರ್ಥವು ಇದಲ್ಲ - ಅವರಿಗೆ ಯಾವುದೇ ಆಕಾರವಿಲ್ಲ. ಆದರೆ ಅವಶ್ಯವಾಗಿ ಬೇರೆ ಜಗತ್ತಿದೆ, ಅದು ಸ್ಥೂಲ ಜಗತ್ತಿನಂತೆ ಆಕಾರವಲ್ಲ. ಹೇಗೆ ಪರಮಾತ್ಮನು ನಿರಾಕಾರನಾಗಿದ್ದಾರೆ ಆದರೆ ಅವರ ಸೂಕ್ಷ್ಮ ರೂಪವಂತು ಅವಶ್ಯವಾಗಿ ಇದೆ. ನಾವು ಆತ್ಮ ಮತ್ತು ಪರಮಾತ್ಮನ ನಿವಾಸ ಸ್ಥಾನವು ನಿರಾಕಾರಿ ಜಗತ್ತಾಗಿದೆ. ಅಂದಮೇಲೆ ಯಾವಾಗ ಜಗತ್ತು ಎಂಬ ಶಬ್ದವನ್ನು ಹೇಳುತ್ತೇವೆಯೋ ಆಗ ಸಿದ್ಧವಾಗುತ್ತದೆ - ಅದೂ ಜಗತ್ತಾಗಿದೆ ಮತ್ತು ಅಲ್ಲಿ ಯಾರೋ ಇರುತ್ತಾರೆ, ಆದ್ದರಿಂದ ಜಗತ್ತೆಂಬ ಹೆಸರು ಬಂದಿದೆ. ಈಗ ಪ್ರಪಂಚದ ಜನರಂತು ತಿಳಿಯುತ್ತಾರೆ - ಪರಮಾತ್ಮನ ರೂಪವೂ ಅಖಂಡ ಜ್ಯೋತಿ ತತ್ವವಾಗಿದೆ ಆದರೆ ಅದಂತು ಪರಮಾತ್ಮನಿರುವ ಸ್ಥಾನವಾಗಿದೆ, ಅದನ್ನು ನಿವೃತ್ತ ಧಾಮವೆಂದು ಹೇಳಲಾಗುತ್ತದೆ. ಹಾಗಾದರೆ ನಾವು ಪರಮಾತ್ಮನ ಮನೆಯನ್ನು ಪರಮಾತ್ಮನೆಂದು ಹೇಳುವುದಕ್ಕೆ ಆಗುವುದಿಲ್ಲ. ಈಗ ಇನ್ನೊಂದು ಆಕಾರಿ ಪ್ರಪಂಚ, ಅಲ್ಲಿ ಬ್ರಹ್ಮಾ-ವಿಷ್ಣು-ಶಂಕರ ದೇವತೆಗಳು ಆಕಾರಿ ರೂಪದಲ್ಲಿರುತ್ತಾರೆ ಹಾಗೂ ಇದು ಸಾಕಾರಿ ಜಗತ್ತಾಗಿದೆ. ಇದರಲ್ಲಿ ಎರಡು ಭಾಗಗಳಿವೆ – ಒಂದು - ನಿರ್ವಿಕಾರಿ ಸ್ವರ್ಗವಿರುವ ಜಗತ್ತು, ಎಲ್ಲಿ ಅರ್ಧಕಲ್ಪ ಸದಾ ಪವಿತ್ರತೆ, ಸುಖ ಹಾಗೂ ಶಾಂತಿಯಿದೆ. ಇನ್ನೊಂದು - ವಿಕಾರಿ ಕಲಿಯುಗಿ ದುಃಖ ಹಾಗೂ ಅಶಾಂತಿಯಿರುವ ಜಗತ್ತಾಗಿದೆ. ಈಗ ಇದನ್ನು ಎರಡು ಪ್ರಪಂಚಗಳೆಂದು ಏಕೆ ಹೇಳುತ್ತಾರೆ? ಏಕೆಂದರೆ ಮನುಷ್ಯರೇನು ಸ್ವರ್ಗ ಮತ್ತು ನರಕವೆಂದು ಹೇಳುತ್ತಾರೆ, ಅದನ್ನು ಪರಮಾತ್ಮನು ರಚಿಸುವ ಪ್ರಪಂಚವೆಂದು ಹೇಳುತ್ತಾರೆ. ಇದರ ಬಗ್ಗೆ ಪರಮಾತ್ಮನ ಮಹಾವಾಕ್ಯವಿದೆ - ಮಕ್ಕಳೇ, ನಾನೇನೂ ದುಃಖದ ಪ್ರಪಂಚವನ್ನು ರಚಿಸಲಿಲ್ಲ, ನಾನು ಯಾವ ಪ್ರಪಂಚವನ್ನು ರಚಿಸಿದೆನೋ ಅದು ಸುಖದ ರಚನೆಯಾಗಿದೆ. ಈಗ ಇದೇನು ದುಃಖ ಮತ್ತು ಅಶಾಂತಿ ಪ್ರಪಂಚವಾಗಿದೆ, ಅದನ್ನು ಮನುಷ್ಯಾತ್ಮರು ತನ್ನನ್ನು ತಾನು ಹಾಗೂ ಪರಮಾತ್ಮನಾದ ನನ್ನನ್ನು ಮರೆತಿರುವ ಕಾರಣ ಇಷ್ಟೆಲ್ಲಾ ಕರ್ಮಭೋಗವನ್ನು ಅನುಭವಿಸುತ್ತಿದ್ದಾರೆ. ಅದು ಹೀಗಲ್ಲ- ಯಾವ ಸಮಯದಲ್ಲಿ ಸುಖ ಹಾಗೂ ಪುಣ್ಯದ ಪ್ರಪಂಚವಿದೆಯೋ ಅಲ್ಲಿ ಯಾವುದೇ ಸೃಷ್ಟಿಯು ನಡೆಯುವುದಿಲ್ಲ. ಅವಶ್ಯವಾಗಿ ಅಲ್ಲಿ ದೇವತೆಗಳ ನಿವಾಸ ಸ್ಥಾನವಾಗಿತ್ತೆಂದು ನಾವು ಹೇಳುತ್ತೇವೆ. ಅಂದಮೇಲೆ ಅಲ್ಲಿ ಅವಶ್ಯವಾಗಿ ಪ್ರವೃತ್ತಿಯು ನಡೆಯುತ್ತಿತ್ತು ಆದರೆ ವಿಕಾರಿ ಜನ್ಮವಿರಲಿಲ್ಲ, ಆದ್ದರಿಂದ ಯಾವುದೇ ಕರ್ಮ ಬಂಧನವಿರಲಿಲ್ಲ. ಆ ಪ್ರಪಂಚವನ್ನು ಕರ್ಮ ಬಂಧನ

ರಹಿತವಾದ ಸ್ವರ್ಗದ ಜಗತ್ತೆಂದು ಹೇಳಲಾಗುತ್ತದೆ. ಹಾಗಾದರೆ ಒಂದು - ನಿರಾಕಾರಿ ಜಗತ್ತು, ಇನ್ನೊಂದು - ಆಕಾರಿ ಜಗತ್ತು, ಮೂರನೆಯದು - ಸಾಕಾರಿ ಜಗತ್ತಾಗಿದೆ.

"ಭಗವಂತನು ಬರುವ ಅನಾದಿಯಾಗಿ ರಚಿಸಿರುವ ಕಾರ್ಯಕ್ರಮ"

ಮನುಷ್ಯರು ಈಗ ಯಾವ ಹಾಡನ್ನು ಹಾಡುತ್ತಾರೆ - ಭಗವಂತನೇ, ತಮ್ಮ ವಚನವನ್ನು ನಿಭಾಯಿಸಲು ಬಂದು ಬಿಡಿ. ಈಗ ಸ್ವಯಂ ಗೀತೆಯ ಭಗವಂತನೇ ಈಗ ಕಲ್ಪದ ಮೊದಲಿನ ವಚನವನ್ನು ಪಾಲಿಸುವುದಕ್ಕಾಗಿ ಬಂದಿದ್ದಾರೆ ಮತ್ತು ಹೇಳುತ್ತಾರೆ - ಹೇ ಮಕ್ಕಳೇ, ಯಾವಾಗ ಭಾರತದಲ್ಲಿ ಅತಿ ಧರ್ಮ ಗ್ಲಾನಿಯಾಗುವುದೋ ಆಗ ನಾನು ಇದೇ ಸಮಯದಲ್ಲಿ ನನ್ನನ್ನು ಪ್ರತಿಜ್ಞೆಯನ್ನು ನಿಭಾಯಿಸುವುದಕ್ಕಾಗಿ ಅವಶ್ಯವಾಗಿ ಬರುತ್ತೇನೆ, ಈಗ ನಾನು ಬರುತ್ತೇನೆಂದರೆ ಅರ್ಥ ಇದಲ್ಲ - ನಾನು ಯುಗ-ಯುಗದಲ್ಲಿಯೂ ಬರುತ್ತೇನೆ. ಎಲ್ಲಾ ಯುಗಗಳಲ್ಲಿ ಧರ್ಮ ಗ್ಲಾನಿಯೇನೂ ಆಗುವುದಿಲ್ಲ, ಧರ್ಮ ಗ್ಲಾನಿ ಆಗುವುದೇ ಕಲಿಯುಗದಲ್ಲಿ. ಅಂದಾಗ ಪರಮಾತ್ಮನು ಕಲಿಯುಅಗದ ಸಮಯದಲ್ಲಿ ಬರುತ್ತಾರೆಂದು ತಿಳಿಯಿತಿ. ಮತ್ತೆ ಕಲಿಯುಗವೂ ಕಲ್ಪ-ಕಲ್ಪದಲ್ಲಿಯೂ ಬರುತ್ತದೆ, ಅಂದಾಗ ಅವಶ್ಯವಾಗಿ ಅವರೂ ಕಲ್ಪ-ಕಲ್ಪವೂ ಬರುತ್ತಾರೆ. ಕಲ್ಪದಲ್ಲಿ ನಾಲ್ಕು ಯುಗಗಳಿವೆ, ಅದನ್ನೇ ಕಲ್ಪವೆಂದು ಹೇಳಲಾಗುವುದು. ಅರ್ಧಕಲ್ಪ ಸತ್ಯ-ತ್ರೇತಾಯುಗದಲ್ಲಿ ಸತೋಗುಣ ಸತೋಪ್ರಧಾನವಿದ್ದಾರೆ, ಅಲ್ಲಿ ಪರಮಾತ್ಮನು ಬರುವ ಅವಶ್ಯಕತೆಯೇ ಇಲ್ಲ. ಮತ್ತು ದ್ವಾಪರಯುಗದಿಂದಂತು ಅನ್ಯ ಧರ್ಮಗಳ ಆರಂಭವಾಗುತ್ತದೆ, ಆ ಸಮಯದಲ್ಲಿಯೂ ಅತಿ ಧರ್ಮಗ್ಲಾನಿ ಆಗುವುದಿಲ್ಲ, ಇದರಿಂದ ಸಿದ್ಧವಾಗುತ್ತದೆ - ಪರಮಾತ್ಮನು ಮೂರು ಯುಗಗಳಲ್ಲಿಯೂ ಬರುವುದೇ ಇಲ್ಲ, ಇನ್ನು ಉಳಿದಿರುವುದು ಕಲಿಯುಗ. ಅದರ ಅಂತ್ಯದಲ್ಲಿ ಅತಿ ಧರ್ಮ ಗ್ಲಾನಿಯಾಗುತ್ತದೆ, ಅದೇ ಸಮಯದಲ್ಲಿ ಪರಮಾತ್ಮನು ಬಂದು ಅಧರ್ಮದ ವಿನಾಶ ಮಾಡಿ, ಸತ್ಯ ಧರ್ಮದ ಸ್ಥಾಪನೆ ಮಾಡುತ್ತಾರೆ. ಒಂದುವೇಳೆ ದ್ವಾಪರದಲ್ಲೇನಾದರೂ ಬಂದಿದ್ದರೆ, ದ್ವಾಪರದ ನಂತರ ಸತ್ಯಯುಗವಾಗಬೇಕು ಆದರೆ ಕಲಿಯುಗವೇಕೆ? ಈ ರೀತಿಯೂ ಹೇಳುವುದಿಲ್ಲ - ಪರಮಾತ್ಮನಂತು ಕಲಿಯುಗದ ಸ್ಥಾಪನೆ ಮಾಡಿದರು, ಈಗ ಈ ಮಾತಾಗಲು ಸಾಧ್ಯವೇ ಇಲ್ಲ ಆದ್ದರಿಂದ ಪರಮಾತ್ಮನೇ ಹೇಳುತ್ತಾರೆ - ನಾನು ಒಬ್ಬನು, ಮತ್ತು ನಾನೇ ಬಂದು ಅಧರ್ಮದ ವಿನಾಶ ಮಾಡಿ, ಕಲಿಯುಗದ ವಿನಾಶ ಮಾಡಿ ಸತ್ಯಯುಗದ ಸ್ಥಾಪನೆ ಮಾಡುತ್ತೇನೆ. ಅಂದಮೇಲೆ ನಾನು ಬರುವ ಸಮಯ ಸಂಗಮಯುಗವಾಗಿದೆ. ಒಳ್ಳೆಯದು. ಓಂ ಶಾಂತಿ.